



14
ರಾಜನೇ, ಆ ಕಬ್ಬಿಣದ ಶೂಲ ಹಾಗೆಯೇ ಇರಲಿ, ಬಿಡು. ಇದಕ್ಕೆ ಹೂವಿನ ಬುಟ್ಟಿಯನ್ನು ನೇತುಹಾಕಿಕೊಳ್ಳಬಹುದು. ಶಿವಪೂಜೆ ಮಾಡುವಾಗ ಇದು ಉಪಯೋಗಕ್ಕೆ ಬರುತ್ತದೆ.
ಓ ಮಹಾತ್ಮರೇ, ಇಚ್ಛೆ ಬಂದಾಗಲೆಲ್ಲ ಭಗವಂತನ ದರ್ಶನ ಮಾಡುವವರು ನೀವು. ನಿಮಗೆ ಇಂತಹ ಪರಿಸ್ಥಿತಿ ಬಂತಲ್ಲಾ!


15
ರಾಜಾ, ನಾನು ಬಾಲ್ಯದಲ್ಲಿ ತಮಾಷೆಗಾಗಿ ಚಿಟ್ಟೆಗಳನ್ನು ಹಿಡಿದು, ಅದರ ರೆಕ್ಕೆಗಳನ್ನು ಕತ್ತರಿಸಿ, ಸೂಜಿಯಿಂದ ಚುಚ್ಚುತ್ತಿದ್ದೆ. ಯಮಧರ್ಮರಾಯ ನನ್ನ ಆ ದುಷ್ಟತನಕ್ಕೆ ಈಗ ತಕ್ಕ ಶಿಕ್ಷೆಯನ್ನು ಕೊಟ್ಟಿದ್ದಾನೆ.


16
ಮಹರ್ಷಿಗಳು ಕತ್ತಿನಲ್ಲಿ ಚುಚ್ಚಿದ ಶೂಲದೊಂದಿಗೇ ಜೀವಿಸತೊಡಗಿದರು. ಅವರನ್ನು ಶೂಲದ ಮಾಂಡವ್ಯರೆಂದೇ ಕರೆಯುತ್ತಿದ್ದರು. ಅವರು ಸಾಧನೆಯಲ್ಲಿ ಬಹಳ ಮುಂದು ವರೆದರು. ತಾವು ಮಾಡಿದ್ದ ತಪ್ಪಿಗೆ ಸೂಕ್ತ ಶಿಕ್ಷೆಯನ್ನು ಅನುಭವಿಸಿದರು. ಇದು ನಮಗೆಲ್ಲ ನೀತಿಪಾಠ ಕಲಿಸುತ್ತದೆ.
ಶರೀರ ಹುಟ್ಟುತ್ತದೆ ಮತ್ತು ಅಳಿಯುತ್ತದೆ. ಆತ್ಮ ಮಾತ್ರ ಎಂದೂ ಅಳಿಯುವುದಿಲ್ಲ. ಅದು ಅಡಿಕೆ ಕಾಯಿಯಂತೆ. ಹಸಿಕಾಯಿಯನ್ನು ಸಿಪ್ಪೆಯಿಂದ ಬೇರ್ಪಡಿಸುವುದು ಕಷ್ಟ. ಆತ್ಮ ಶರೀರಕ್ಕೆ ಸಂಬಂಧಪಟ್ಟಿಲ್ಲ ಎಂಬುದನ್ನು ಆತ್ಮಸಾಕ್ಷಾತ್ಕಾರವಾದ ಜ್ಞಾನಿಗಳು ಬಲ್ಲರು.
ಶ್ರೀರಾಮಕೃಷ್ಣ